**<u>ದಿನಾಂಕಃ 19.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಎಂ.ಎಂ. ವಕೀಲರಿಂದಃ-</u>**

1) ದಾವಾ ಷೆಡ್ಯೂಲ್ 30 ಗುಂಟೆ ಸ್ವತ್ತಿನ ಸಂಪೂರ್ಣ ಕಂದಾಯ ದಾಖಲಾತಿಗಳನ್ನು ನಾನು ನೋಡಿದ್ದೇನೆ. 1 ನೇ ಪ್ರತಿವಾದಿಗೆ ಅವರ ತಾತ ಕರಿಯಯ್ಯ ರವರಿಂದ ದಾನವಾಗಿ ಬಂದಂತಹ ಸ್ವತ್ತು. ಆ ಬಗ್ಗೆ ದಾನಪತ್ರವನ್ನು ನೋಡಿದ್ದೇನೆ. ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೂ ಹಾಜರುಪಡಿಸಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಅವರ ತಾತ ಕರಿಯಯ್ಯ ರವರು ಯಾವುದೇ ದಾನಪತ್ರ ಮಾಡಿಕೊಟ್ಟಿಲ್ಲ, ಅಕ್ರಮವಾಗಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕರಿಯಯ್ಯ ರವರಿಗೆ 1 ನೇ ಪ್ರತಿವಾದಿ ಸೇರಿದಂತೆ ಒಟ್ಟು ಮೂರು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ ಕರಿಯಯ್ಯ ರವರಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಗೊತ್ತಿಲ್ಲ. ಸದರಿ ಕರಿಯಯ್ಯ ರವರು ಅವರ ಜೀವಿತಾವಧಿಯಲ್ಲಿ ಅವರ ಮೂರು ಜನ ಹೆಣ್ಣು ಮಕ್ಕಳಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಪತ್ರವನ್ನಾಗಲೀ, ವ್ಯವಸ್ಥಾ ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಮೂರು ಜನ ಹೆಣ್ಣು ಮಕ್ಕಳ ಪೈಕಿ ಒಬ್ಬ ಮಗಳ ಮಗನಿಗೆ ವಿಲ್ ಪತ್ರವನ್ನು ಬರೆದಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಕರಿಯಯ್ಯ ಯಾವುದೇ ವಿಲ್ ಮಾಡಿಲ್ಲ, ಅಕ್ರಮವಾಗಿ ನಾವೇ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಪೈಕಿ 1 ನೇ ಪ್ರತಿವಾದಿ 3/1 ಭಾಗಕ್ಕೆ ಮಾತ್ರ ಹಕ್ಕುದಾರರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರೊಬ್ಬರಿಗೆ ಮಾತ್ರ ಹಕ್ಕು ಇರುವುದು ಎಂದು ನುಡಿಯುತ್ತಾರೆ. ಅದೇ ರೀತಿ ವಾದಿಗಳು ಮತ್ತು ಪ್ರತಿವಾದಿ 2 ರಿಂದ 4 ರವರು 3/2 ಭಾಗಕ್ಕೆ ಹಕ್ಕುದಾರರು ಎಂದರೆ ಸಾಕ್ಷಿ ಅವರು ಭಾಗ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಮತ್ತು 2 ರಿಂದ 4 ನೇ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿ ದಾಖಲೆ ಸೃಷ್ಟಿ

ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಿಂದ 5 ರಿಂದ 9 ನೇ ಪ್ರತಿವಾದಿಗಳು ಮಾಡಿಕೊಂಡಿರುವ ಕ್ರಯಪತ್ರಗಳು ಕಾನೂನಿನ ಅಡಿಯಲ್ಲಿ ಊರ್ಜಿತವಾದ ಪತ್ರಗಳಲ್ಲ ಎಂದರೆ ಸರಿಯಲ್ಲ. ಕಾರಣ 1 ನೇ ಪ್ರತಿವಾದಿಗೆ ಹಕ್ಕು ಇಲ್ಲದೇ ಇದ್ದರೂ ಮಾಡಿಸಿಕೊಂಡಂತಹ ದಾಖಲಾತಿಗಳು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ನಾನು ಯಾವುದೇ ಲೇ ಔಟ್ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಲೇ ಔಟ್ ನ್ನು ಅಧಿಕಾರ ಹೊಂದಿರುವ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಆ ಸಮಯದಲಿಲ ಯಾವುದೇ ಪ್ರಾಧಿಕಾರ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಈಗಲೂ ಸಹ ಕಂದಾಯ ಜಮೀನಾಗಿ ಉಳಿದುಕೊಂಡಿದೆ ಎಂದರೆ ಸರಿಯಲ್ಲ. ಈಗಲೂ ಸಹ ಕಂದಾಯ ಇಲಾಖೆಯಲ್ಲಿ ಸರ್ವೆ ನಂ.31/6 ರಲ್ಲಿ 30 ಗುಂಟೆ ಎಂದು ಈಗಲೂ ಸಹ ನಮೂದು ಇದೆ ಎಂದರೆ ಸಾಕ್ಷಿ ಭೂ ಪರಿವರ್ನೆ ಆದ ನಂತರ ಪಹಣಿ ಪತ್ರಿಕೆಯಲ್ಲಿ ಎನ್.ಎ.ಕೆ ಎಂದು ನಮಾದು ಮಾಡಬೇಕಾಗಿತ್ತು, ನಮೂದು ಮಾಡದೇ ಇದ್ದ ಕಾರಣ ತಮ್ಮ ಮಗಳ ಹೆಸರಿಗೆ ದಾನ ಪತ್ರ ಬರೆದು ದಾಖಲಾತಿ ಮುಂದುವರೆದಿದೆ ಎಂದು ನುಡಿಯುತ್ತಾರೆ. 1 ನೇ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಗಳು ಮತ್ತು 2 ರಿಂದ 4 ನೇ ಪ್ರತಿವಾದಿಗಳು ಅವರಿಗೆ ಸೇರಿದ 3/2 ಭಾಗದ ಹಿಸ್ಸೆಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾವು ಅಕ್ರಮವಾಗಿ ಮಾಡಿಕೊಂಡಿರುವ ಕ್ರಯಪತ್ರಗಳ ಆಧಾರದ ಮೇಲೆ ಹಕ್ಕು ಮತ್ತು ಸ್ವಾಧೀನ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ